ಕರ್ನಾಟಕ ಸರ್ಕಾರ

ಸಂಖ್ಯೆ: ಪಪೂಶಿಇ/ಇ-ಆಡಳಿತ/ಎಸ್‌ಎಟಿಎಸ್/2019-20

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
18ನೇ ಅಡ್ಡರಸ್ತೆ, ಮಲ್ಲೇಶ್ವರಂ,
ಬೆಂಗಳೂರು-560012.
ದಿನಾಂಕ: 24-12-2020

**ಪ್ರಾಮುಖ್ಯವಾದುದು**

**ಸುತ್ತೋಲೆ**

**ವಿಷಯ:** 2020-21 ಸಾಲಿನ ಪ್ರಥಮ ಪಿ.ಯು.ಸಿ ವಿದ್ಯಾರ್ಥಿಗಳ ಮಾಹಿತಿಗಳನ್ನು ಆನ್‌ಲೈನ್ ಮೂಲಕ ಎಸ್‌ಎಟಿಎಸ್ ಪೋರ್ಟ್‌ಲ್‌ನಲ್ಲಿ ದಾಖಲಿಸುವ ಬಗ್ಗೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2020-21ನೇ ಶೈಕ್ಷಣಿಕ ಸಾಲಿನಲ್ಲಿ ಸರ್ಕಾರಿ, ಅನುದಾನಿತ, ಖಾಸಗಿ ಅನುದಾನರಹಿತ, ವಿಭಜಿತ ಹಾಗೂ ಬಿಬಿಎಂಪಿ ಪದವಿ ಪೂರ್ವ ಕಾಲೇಜುಗಳ ಎಲ್ಲಾ ಪ್ರಥಮ ಪಿ.ಯು.ಸಿ ವಿದ್ಯಾರ್ಥಿಗಳ ದಾಖಲಾತಿ ವಿವರಗಳನ್ನು ಆನ್‌ಲೈನ್ ಮುಖಾಂತರ ಎಸ್‌ಎಟಿಎಸ್ ಪೋರ್ಟಲ್‌ನಲ್ಲಿ ನೀಡಲು ತಿಳಿಸಲಾಗಿದೆ.

ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ಎಸ್‌ಎಟಿಎಸ್ ತಂತ್ರಾಂಶದ-ವೆಬ್‌ಸೈಟ್ (www.pue.kar.nic.in) ಅಥವಾ (www.sts.karnataka.gov.in/SATSPU) ಇದರಲ್ಲಿ ಪದವಿ ಪೂರ್ವ ಕಾಲೇಜಿನವರು ಲಾಗಿನ್ ಆಗಿ ತಮ್ಮ ಎಲ್ಲಾ ಪಿಯುಸಿ ವಿದ್ಯಾರ್ಥಿಗಳ ಸಂಪೂರ್ಣ ನಿಖರ ಮಾಹಿತಿಗಳನ್ನು ಭರ್ತಿಮಾಡಲು ಸೂಚಿಸಿದೆ. ಈ ಹಿಂದೆ ಕಾರ್ಯನಿರ್ವಹಿಸುತ್ತಿದ್ದ ಪಿಯು ಪೋರ್ಟ್‌ಲ್ ಸ್ಥಗಿತವಾಗಿದ್ದು, ಹಂತ ಹಂತವಾಗಿ ವಿದ್ಯಾರ್ಥಿಗಳ ಮಾಹಿತಿ ನಿರ್ವಹಣೆಯನ್ನು ಮುಂದಿನ ದಿನಗಳಲ್ಲಿ ಎಸ್‌ಎಟಿಎಸ್ ತಂತ್ರಾಂಶದಲ್ಲೇ ನಿರ್ವಹಿಸಲಾಗುವುದು.

**ಅನುದಾನಿತ, ಅನುದಾರಹಿತ ಹಾಗೂ ಪದವಿ ವಿಭಜಿತ ಪದವಿ ಪೂರ್ವ ಕಾಲೇಜುಗಳಿಗೆ ಸೂಚನೆ:**

1. ಈಗಾಗಲೇ ಇಲಾಖೆಯಿಂದ ಅನುಮೋದನೆಗೊಂಡಿರುವ ಭಾಷಾ ವಿಷಯ ಹಾಗೂ ಸಂಯೋಜನೆಗಳನ್ನು ವಿಭಾಗವಾರು ಅಪ್‌ಡೇಟ್ ಮಾಡಿದ ನಂತರ ವಿದ್ಯಾರ್ಥಿಗಳ ಮಾಹಿತಿ ಅಪ್‌ಡೇಟ್ ಮಾಡಲು ಅವಕಾಶ ಲಭ್ಯವಾಗುವುದು.
2. **ಪ್ರತಿ ವಿಭಾಗವನ್ನು ನಿಗದಿತ ಸಂಖ್ಯೆ (ಗರಿಷ್ಠ 80) ನಿಗದಿ ಪಡಿಸಿದ್ದು, 80 ವಿದ್ಯಾರ್ಥಿಗಳ ಮಾಹಿತಿಗಳನ್ನು ನಮೂದಿಸಿದ ಕೂಡಲೇ ಆ ವಿಭಾಗವು 80 ಕ್ಕೆ ಸ್ಥಗಿತಗೊಳ್ಳುವದು.**
3. ಎರಡನೇ ವಿಭಾಗ ಸಕ್ರಿಯೆಗೊಳಿಸಲು ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಅಪಲೋಡ್ ಮಾಡಿದ ನಂತರ ಸಕ್ರಿಯಗೊಳಿಸಲಾಗುವುದು.
4. ಒಂದುವೇಳೆ 20 ವಿದ್ಯಾರ್ಥಿಗಳಿಗೆ ಹೆಚ್ಚುವರಿ (80 ರಿಂದ 100 ಕ್ಕೆ) ಅನುಮತಿ ಪಡೆದಿದ್ದಲ್ಲಿ ಪ್ರತ್ಯೇಕ option entry ಗೆ ಅವಕಾಶವಿರುವುದು. ಸಂಬಂಧಿಸಿದ ಆದೇಶದ ಪ್ರತಿಗಳನ್ನು ಸ್ಪಷ್ಟವಾಗಿ ಅಪ್‌ಲೋಡ್ ಮಾಡುವುದು, ಇಲ್ಲವಾದಲ್ಲಿ ಕೇಂದ್ರ ಕಛೇರಿಯಿಂದ ಪರಿಶೀಲಿಸಿ ಸದರಿ ವಿಭಾಗಗಳು ತಿರಸ್ಕರಿಸಲಾಗುವುದು.

5. ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ, ಅನುದಾನಿತ ಹಾಗೂ ಅನುದಾನ ರಹಿತ ಸಂಯೋಜನೆ/ವಿಭಾಗಗಳು ಇರುತ್ತದೆ. ಅಂತಹ ಸಂದರ್ಭದಲ್ಲಿ ಅನುದಾನಿತ ಹಾಗೂ ಅನುದಾನರಹಿತ ವಿಭಾಗಗಳನ್ನು ಪ್ರತ್ಯೇಕವಾಗಿ ನಮೂದಿಸುವುದು.

**ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರುಗಳಿಗೆ ಸೂಚನೆ:-**

ಮುಂದುವರೆದು ತರಗತಿಗಳು ಪ್ರಾರಂಭಗೊಂಡ ನಂತರ ದಿನವಹಿ, ವಿದ್ಯಾರ್ಥಿಗಳ ಹಾಜರಾತಿ ಸಂಖೆಯನ್ನು ನಮೂದಿಸಲು ಆಯಾ ಕಾಲೇಜಿನ ಲಾಗಿನ್‌ನಲ್ಲಿ ಅವಕಾಶ ಕಲ್ಪಿಸಲಾಗಿದೆ, ತಪ್ಪದೆ ದೈನಂದಿನ ವಿದ್ಯಾರ್ಥಿಗಳ ಹಾಜರಾತಿ ಸಂಖ್ಯೆಯನ್ನು ಸಂಬಂಧಪಟ್ಟ ಕಾಲೇಜಿನ ಪ್ರಾಚಾರ್ಯರು ಅಪ್‌ಡೇಟ್ ಮಾಡುವುದು.

ಸದರಿ ತಂತ್ರಾಂಶದಲ್ಲಿ ನಮೂದಿಸಿರುವ ವಿದ್ಯಾರ್ಥಿಗಳ ಮಾಹಿತಿಯನ್ನು ಪ್ರಾಚಾರ್ಯರು ನಿಖರ ದಾಖಲೆಗಳೊಂದಿಗೆ ಪರಿಶೀಲಿಸುವುದು ಕಡ್ಡಾಯವಾಗಿದೆ. ಸಲ್ಲಿಸಿದ ಮಾಹಿತಿಯ ಪೂರ್ಣತೆ ಹಾಗೂ ನಿಖರತೆಗೆ ಪ್ರಾಂಶುಪಾಲರೇ ಸಂಪೂರ್ಣ ಜವಾಬ್ದಾರರಾಗಿರುತ್ತಾರೆ.

ಹೆಚ್ಚಿನ ಮಾಹಿತಿಗಾಗಿ ಯುಸರ್ ಮ್ಯಾನ್ಯುಲ್‌ಅನ್ನು ಈ ಪತ್ರದೊಂದಿಗೆ ಲಗತ್ತಿಸಿದೆ. ಈ ಪ್ರಕ್ರಿಯೆಯಲ್ಲಿ ಏನಾದರು ತೊಂದರೆ ಅಥವಾ ಅಡಚಣೆ ಇದ್ದಲ್ಲಿ dpuesats@gmail.com ಗೆ ಇ–ಮೇಲ್ ಮೂಲಕ ಆಕ್ಷೇಪಣೆ ಸಲ್ಲಿಸುವುದು.

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಗೆ,

ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರಿಗೆ ಅಗತ್ಯ ಕ್ರಮಕ್ಕಾಗಿ.

ಪ್ರತಿ.

1. ಇ–ಆಡಳಿತ ಶಾಖೆ, ಇಲಾಖಾ ಅಂತರ್‌ಜಾಲದಲ್ಲಿ ಅಳವಡಿಸಲು.
2. ಎಲ್ಲಾ ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ.
3. ಕಛೇರಿ ಪ್ರತಿ.